ತಾರೀಖು 30ನೆ ಸೆಪಟಂಬರ್ 1907.

ನಂ. ರೆ. 2350 –ಲ್ಯಾ. ರೆ. 173–07—3, ಸ॥ 1894ನೆಯ್ದು ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ, ತಿ. ನರಸೀಪುರ ತಾಲ್ಲೂಕಿನಲ್ಲಿರುವ ಶ್ರೀರಂಗಪಟ್ಣ—ಸೋಸಲೆ–ಶಿವಸಮುದ್ರ ರಸ್ತೆಗಳಲ್ಲಿ ಮರಹಮ್ಮತ್ತು ಇಲಾಖೆಗಾಗಿ ಗ್ರಾವೆಲ್ ಗುಂಡಿಯನ್ನು ತೋಡುವುದಕ್ಕೆ ಅವಶ್ಯಕವಾಗಿವೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂಜನಗೂಡು ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬ್ಳಿ	ಗ್ರಾಮ	ಖಾತೇದಾರನ ಹೆಸರು	ಸರ್ವೆ ನಂಬರ್.	ಖುಷ್ಕಿ ತರಿ ಯಾ ಬಾಗಾಯಿತು	ಒಟ್ಟು ವಿಸ್ತೀರ್ಣ	ಕಂದಾಯ	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
										ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
							ಎ. ಗು.	ರೂ. ಆ.	ಗುಂಟೆಗಳು. ಗಜಗಳು.				
ಮೈಸೂರು	ತಿ. ನರಸೀಪುರ	ಸೋಸಲೆ	ಸೋಸಲೆ	ಬಿಸ್ತರ ಮೊಂಡ.	534	ಖುಷ್ಕಿ	3 34	2 4	20 ಗು. 50 ಗ.	ಸರ್ವೆ ನಂ. 533	ಸರ್ವೆ ನಂ. 539	ರಸ್ತೆ	ಸರ್ವೆ ನಂ. 534 (ಉಳಿದ ಭಾಗ)
			ಹಸವಳ್ಳಿ	ಸಿದ್ದ ಬಿನ್ ಕುಂಡಬೋರನ ಮಂಟ್ಯ.	164	ಡಿಟೋ	0 26	0 8	26 ಗ. 0	ಖಾಲಿ ನಿವೇಕನ	ಸರ್ವೆ ನಂ. 2	ರಸ್ತೆ	ಸರ್ವೆ ನಂ. 1

ತಾರೀಖು 4ನೆ ಅಕ್ಟೋಬರ್ 1907.

ನಂ. ಫೈ. 1571 ಎಸ್. ಆರ್. 33–07–2, ಅಸಿಸ್ಟೆಂಟ್ ಕಮಿಷನರುಗಳಾಗಿ ಬದಲಿ ನೋಡುತ್ತಿರುವ ಮಿ॥ ಜಿ. ಆರ್. ಶ್ರೀನಿವಾಸ್ಯಯ್ಯಂಗಾರ್‌ನ್ನೂ ಮಿ॥ ಎಂ. ರಂಗರಾಯರನ್ನೂ ಅವರಿಗೆ ಮೊದಲು ಇದ್ದ ಅಮಲ್ದಾರ್ ಕೆಲಸಕ್ಕೆ ವಾಪಸು ಕಳುಹಿಸಿ, ಅವರನ್ನು ಅಮಲ್ದಾರರ ದರ್ಜೆಯುಳ್ಳ ಡಿಸ್ಟ್ರಿಕ್ಟ್ ಅಬ್ಕಾರಿ ಅಧಿಕಾರಿಗಳಾಗಿ ನೇಮಕರ್ಮಾಡಿದೆ.

ಹುಕುಂ ಬಮೋಜೀಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇನ್ಸ್ಟ್ರುಮೆಂಟ್ಸ್.

ತಾರೀಖು 9ನೆ ಅಕ್ಟೋಬರ್ 1907.

ನಂ. 982—7176, ಸ॥ 1907ನೆ ಸೆಪಟಂಬರ್ 30ನೆ ತಾರೀಖು 7010ನೆ ನಂಬರ್ ಇನ್ಸ್ಟ್ರುಮೆಂಟ್ಸ್‌ಗೆ ಬದಲಾಗಿ ಈ ಕೆಳಗೆ ನಮೂದಿಸುವ ವರ್ಗವನ್ನು ಹುಕುಂ ಮಾಡಲ್ಪಟ್ಟಿದೆ :—

ಮೆ॥ ಎಂ. ಎ. ಆನಂದಾಲ್ವಾರ್, ಬಿ. ಎ., ಮತ್ತು ಬಿ. ಸಿ. ಇ. ಯವರನ್ನು ಬೆಂಗಳೂರು ಡಿವೀಜನಿಗೆ ಸೇರಿದ ಚನ್ನಪಟ್ಟಣ ಸಬ್ ಡಿವೀಜನಿಂದ ಚಾನಲ್ಸ್ ಡೀವೀಜನಿಗೆ ವರ್ಗ ಮಾಡಲ್ಪಟ್ಟಿದೆ.

ತಾರೀಖು 9ನೆ ಅಕ್ಟೋಬರ್ 1907.

ನಂ. 988–7190, ಕಡೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್, ಮಿ॥ ಹೆಚ್. ಜೆ. ಮಲ್ಲಾಯ, ಎ.ಎಂ., ಐ. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 155 (1) ಮತ್ತು 208 (a) ಆರ್ಟಿಕಲ್ಲುಗಳನುಸರಿಸಿ ಸ॥ 1907ನೆ ಆಗಸ್ಟು 27ನೆ ತಾರೀಖಿನ ಆಗಾಯಿತು 3 ತಿಂಗಳು ಪ್ರಿವಿಲೇಜ್ ರಜಾವನ್ನೂ ಮತ್ತು ಒಂದು ವರ್ಷ ಫರ್ಲೋರಜಾವನ್ನೂ ಕೊಡಲ್ಪಟ್ಟಿದೆ.

(2) ಅಸಿಸ್ಟೆಂಟ್ ಇಂಜನಿಯರ್ ಮಿ॥ ಆರ್. ಎಸ್. ನವರತ್ನ, ಎಲ್. ಸಿ. ಇ., ಯವರನ್ನು, ಮಿ॥ ಮೆಲ್ಲಾಯಿ ಯವರು ರಜಾದ ಮೇಲೆ ಇರುವವರಿಗೂ ಅಥವಾ ಇನ್ನೊಂದು ಹುಕುಂ ಕೊಡುವವರಿಗೂ ಕಡೂರು ಡಿವೀಜನಿನ ಅಫಿಷಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜಿನಿಯರಾಗಿ ನೇಮಕರೂರು ಮಾಡಲ್ಪಟ್ಟಿದೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಹರ್ಟಿ,
ಮೈಸೂರು ಗವರ್ನಮೆಂಟ್ ಪಬ್ಲಿಕ್ ವರ್ಕ್ಸ್ ಇಲಾಖಾ ಸೆಕ್ರೆಟರಿ.